ಕರ್ನಾಟಕ ವಿಧಾನ ಸಭೆ

ಸೋಮವಾರ, ೨೩ನೇ ಜನವರಿ ೧೯೮೪

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಪೂರ್ವಾಹ್ನ ೧೧-೦೦ ಘಂಟೆಗೆ ಸಮಾವೇಶಗೊಂಡಿತು.

(ಅಧ್ಯಕ್ಷರು ಶ್ರೀ ಡಿ.ಬಿ. ಚಂದ್ರೇಗೌಡ ಅವರು ಪೀಠವನ್ನು ಅಲಂಕರಿಸಿದರು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಳಗಾಂ ಜಿಲ್ಲೆಯಲ್ಲಿ ಸೀಮೆಎಣ್ಣೆ ವಿತರಣೆ ಮಾಡುತ್ತಿರುವ ಬಗ್ಗೆ

೬೦ (೧೧೩) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಜನ ಸೀಮೆಎಣ್ಣೆಯ ಕಂಪನಿಯ ವಿತರಣೆಕಾರರು ಇರುತ್ತಾರೆ ಹಾಗೂ ಅವರ ಹೆಸರುಗಳೇನು?

(ಆ) ಸದರಿ ವಿತರಕರಿಗೆ ನಿಗಧಿಪಡಿಸಿದ ತಾಲೂಕುಗಳ ವ್ಯಾಪ್ತಿ ಯಾವುದು?

(ಇ) ಪ್ರತಿ ತಿಂಗಳಿಗೆ ಜಿಲ್ಲೆಗೆ ಕೊಡುವ ಸೀಮೆಎಣ್ಣೆಯ ಪ್ರಮಾಣ ಎಷ್ಟು?

(ಈ) ಹಳ್ಳಿಯಲ್ಲಿ ಅಥವಾ ಪಟ್ಟಣದಲ್ಲಿ ಸೀಮೆಎಣ್ಣೆಯು ಪ್ರತಿ ಕುಟುಂಬಕ್ಕೆ ಹಂಚಿದ ಅಂದಾಜು ಲೀಟರ್ ಎಷ್ಟು?

(ಉ) ಹಳ್ಳಿಯಿಂದ ಪಟ್ಟಣಕ್ಕೆ ಬಂದು ಜನರು ಸೀಮೆಎಣ್ಣೆಗಾಗಿ ಕಾಯುವುದನ್ನು ನಿಲ್ಲಿಸುವುದಕ್ಕೆ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು?

(ಊ) ಗ್ರಾಮ ಸೇವಾ ಸಹಕಾರಿ ಸಂಘಗಳಿಗೆ ಈ ಒಂದು ಹಂಚಿಕೆ ಕೆಲಸವನ್ನು ವಹಿಸುವ ಬಗ್ಗೆ ಆಜ್ಞೆ ಹೊರಡಿಸಲು ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು?

(ಋ) ಕರ್ನಾಟಕ ರಾಜ್ಯ ಮಾರಾಟ ಮಂಡಲಿಯಿಂದ ಸಗಟು ವ್ಯಾಪಾರ ಪಡೆದು ತಾಲೂಕು ಮಾರುಕಟ್ಟೆ ಸಂಘದ ಮುಖೇನ ಸೀಮೆಎಣ್ಣೆ ವಿತರಣೆ ಮಾಡುವುದಕ್ಕೆ ತೆಗೆದುಕೊಂಡ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

(ಅ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ೨೫ ಜನ ಕಂಪನಿಯ ಸಗಟು ವಿತರಣೆಕಾರರು ಇರುತ್ತಾರೆ. ಅವರ ಹೆಸರುಗಳು ಈ ಕೆಳಗಿನಂತೆ ಇರುತ್ತವೆ:

೧) ಮೆ।। ಜಿ.ವಿ. ಕಲಘಟಗಿ, ಬೆಳಗಾವಿ

೨) ಮೆ।। ನಾರಾಯಣದಾಸ್ ಸ್ವಾಮಿಜಿ, ಬೆಳಗಾವಿ

೩) ಮೆ।। ಜಿ.ಕೆ. ಉಂಡಾಳೆ, ಬೆಳಗಾವಿ
೪) ಮೆ।। ದತ್ತಾ ಟ್ರೇಡಿಂಗ್ ಕಂಪನಿ, ಬೆಳಗಾವಿ
೫) ಮೆ।। ರಾಜೇಂದ್ರ ಏಜನ್ಸಿ, ಬೆಳಗಾವಿ
೬) ಮೆ।। ಕಮಜಬಾಯಿ ರಾಹುಜಿ ಸನ್ಸ್, ಬೆಳಗಾವಿ
೭) ಶ್ರೀಮತಿ ಹರತ್ ಆಂಡ್ ಸನ್ಸ್, ಬೆಳಗಾವಿ
೮) ಮೆ।। ಜಿ.ಎಸ್. ಅಜಗಾಂವಕರ, ಬೆಳಗಾವಿ
೯) ಮೆ।। ಮೆಹಬೂಬ ಸರ್ವಿಸ್, ಬೈಲಹೊಂಗಲ
೧೦) ಮೆ।। ಅಂತರಭಾರತಿ, ಖಾನಾಪೂರ
೧೧) ಮೆ।। ವಿ.ವಿ. ಶರದ್, ಖಾನಾಪೂರ
೧೨) ಮೆ।। ಎಂ.ಪಿ. ಪಟ್ಟಣಶೆಟ್ಟಿ, ಸೌಂದತ್ತಿ
೧೩) ಮೆ।। ರಾಕ್ ಆಯಿಲ್ ಅಸೋಸಿಯೇಷನ್, ಯಮಕನಮರಡಿ ತಾ।। ಹುಕ್ಕೇರಿ
೧೪) ಎಸ್.ಬಿ. ಶಿರಕೋಳಿ, ಸಂಕೇಶ್ವರ ತಾಲೂಕು, ಹುಕ್ಕೇರಿ
೧೫) ಶ್ರೀ ಎಸ್.ಆರ್. ಪಾಟೀಲ, ಸಂಕೇಶ್ವರ
೧೬) ಮೆ।। ಹೆಚ್.ಜೆ. ಖೋಜಾ, ಗೋಕಾಕ
೧೭) ಪದ್ಮಾ ಏಜೆನ್ಸಿ, ಘಟಪ್ರಭಾ ತಾಲೂಕು, ಗೋಕಾಕ
೧೮) ಟಿ.ಎ.ಪಿ.ಸಿ.ಎಂ.ಎಸ್., ಗೋಕಾಕ
೧೯) ಆರ್.ಬಿ. ಪಾಟೀಲ, ನಿಪ್ಪಾಣಿ
೨೦) ಎ.ಎಸ್. ಜೋಶಿ, ಅಥಣಿ
೨೧) ಎಸ್.ಎಂ. ಪವಾರ, ಅಥಣಿ
೨೨) ಶ್ರೀಮತಿ ಕೆ.ಆರ್. ಹಿಪ್ಪರಗಿ, ರಾಮದುರ್ಗ
೨೩) ಮೆ।। ಎಸ್.ಎಸ್. ಕುಡಚಿ, ರಾಯಬಾಗ
೨೪) ಶ್ರೀಮತಿ ಭವಾನಿ ಪೆಟ್ರೋಲಿಯಂ, ರಾಯಬಾಗ
೨೫) ಎಸ್.ಆರ್. ಕರಾಳ್, ಚಿಕ್ಕೋಡಿ

(ಆ) ಆಯಾ ತಾಲ್ಲೂಕಿನ ಸಗಟು ವ್ಯಾಪಾರಸ್ಥರು ಪಟ್ಟಣ ಮತ್ತು ಹಳ್ಳಿಗಳಲ್ಲಿ ವಿತರಣೆ ಮಾಡುವಂತೆ ತಿಳಿಸಲಾಗಿದೆ. ಹಾಗೂ ಹೆಚ್ಚಿಗೆ ಸೀಮೆಎಣ್ಣೆಯು ಆ ತಾಲ್ಲೂಕಿನಲ್ಲಿ ಉಳಿಯುತ್ತದೆಯೋ ಅದನ್ನು ಬೇಡಿಕೆ ಇರುವ ತಾಲೂಕುಗಳಿಗೆ ಕಳುಹಿಸಲಾಗುವುದು.

(ಇ) ಪ್ರತಿ ತಿಂಗಳು ಸರಾಸರಿ ೨೨೦೦ ಕಿ.ಲೀ.ದಿಂದ ೨೫೦೦ ಕಿ.ಲೀ.ವರೆಗೆ ಬರುತ್ತದೆ.

(ಈ) ಪಟ್ಟಣಗಳಲ್ಲಿ ಕಾರ್ಡ್ ಒಂದಕ್ಕೆ ತಿಂಗಳೊಂದಕ್ಕೆ ೧೦ ಲೀಟರ್ ಸೀಮೆಎಣ್ಣೆ ಕೊಡುತ್ತದೆ. ಹಳ್ಳಿಗಳಲ್ಲಿ ಕಾರ್ಡುಗಳ ನಿಬಂಧ ಇಲ್ಲದೆ ಹಂಚಲಾಗುತ್ತದೆ.

(ಉ) ಹಳ್ಳಿಯಿಂದ ಬಂದಂಥ ಜನರಿಗೆ ಸೀಮೆಎಣ್ಣೆಯನ್ನು ಕೊಡಲೇ ಕೊಡಲು ಸಗಟು ಮತ್ತು ಚಿಲ್ಲರೆ ವ್ಯಾಪಾರಸ್ಥರಿಗೆ ಸೂಕ್ತ ತಿಳುವಳಿಕೆಯನ್ನು ಕೊಡಲಾಗಿದೆ.

(ಊ) ಈಗ ಹಾಲಿ ಸೀಮೆಎಣ್ಣೆಯನ್ನು ಗ್ರಾಮೀಣ ಮತ್ತು ಪಟ್ಟಣದಲ್ಲಿ ಸರ್ಕಾರದ ಆದೇಶದ ಪ್ರಕಾರ ಯೋಗ್ಯದರದ ಅಂಗಡಿಗಳನ್ನು ಮಂಜೂರು ಮಾಡುವಾಗ ಸಹಕಾರಿ ಸಂಘಗಳಿಗೆ ಹೆಚ್ಚಿನ ಪ್ರಶಸ್ತಿಯನ್ನು ಕೊಡಲಾಗಿದೆ. ಸಹಕಾರಿ ಸಂಘಗಳ ಮುಖಾಂತರ ಸೀಮೆಎಣ್ಣೆಯನ್ನು ಹಂಚಲಾಗುತ್ತಿದೆ.

(ಋ) ಐಒಸಿ/ಹೆಚ್‌ಪಿಸಿ/ಬಿಪಿಸಿ ಕಂಪನಿಗಳು ಸೀಮೆಎಣ್ಣೆಯನ್ನು ಬಿಡುಗಡೆಯನ್ನು ಮಾಡುತ್ತದೆ ಆ ಬಿಡುಗಡೆಯಾದ ಸೀಮೆಎಣ್ಣೆಯನ್ನು ತಾಲೂಕಾ ಪೂರಾಂಕಟ್ಟೆಗಳಿಗೆ ಸಂಘದ ಮುಖಾಂತರ ಆಯಾ ತಾಲೂಕುಗಳ ಬೇಡಿಕೆಯ ಮೇಲೆ ಸೀಮೆಎಣ್ಣೆಯನ್ನು ಪ್ರತಿ

ತಿಂಗಳು ನಿಕರವಾದ ಕೋಟವನ್ನು ಕೊಟ್ಟು ಗ್ರಾಹಕರಿಗೆ ಸೀಮೆಎಣ್ಣೆಯನ್ನು ಹಂಚಲಾಗುತ್ತದೆ. ಕರ್ನಾಟಕ ರಾಜ್ಯ ಮಾರಾಟ ಮಂಡಳಿಯು ಸೀಮೆಎಣ್ಣೆಯನ್ನು ಹಂಚುವುದಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಈ ಪ್ರಶ್ನೆಯನ್ನು ಕೇಳುವುದಕ್ಕೆ ಕಾರಣವೇನೆಂದರೆ ಹಳ್ಳಿಯಿಂದ ಪಟ್ಟಣಕ್ಕೆ ಸಾವಿರಾರು ಸಂಖ್ಯೆಯಲ್ಲಿ ಜನರು ಬಂದು ಕ್ಯೂ ನಿಂತುಕೊಂಡು ಎರಡೆರಡು ದಿವಸಗಳವರೆಗೂ ಕಾದರೂ ಸೀಮೆಎಣ್ಣೆ ಸಿಕ್ಕುತ್ತಿಲ್ಲ. ಪಟ್ಟಣದಲ್ಲಿ ಕಾರ್ಡಿನ ಮೇಲೆ ಸೀಮೆಎಣ್ಣೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ೫ ರೂ. ೧೦ರೂ. ಗಳನ್ನು ಕೂಲಿ ತೆಗೆದುಕೊಂಡು ಕೆಲಸ ಮಾಡತಕ್ಕಂತಹ ಜನರು ಪಟ್ಟಣಕ್ಕೆ ಬಂದು ಎರಡೆರಡು ದಿವಸಗಟ್ಟಲೆ ನಿಂತುಕೊಂಡು ಬಂದು ಲೀಟರ್ ಸೀಮೆಎಣ್ಣೆಯನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ವೇಳೆಯಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ಮತ್ತೆ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಟ್ಯಾಂಕರ್ ಮೂಲಕ ಹೋಗತಕ್ಕ ಸೀಮೆಎಣ್ಣೆ ನಮ್ಮ ರಾಜ್ಯದಿಂದ ಪರ ರಾಜ್ಯಕ್ಕೆ ಹೋಗುತ್ತಿದೆ. ಅಲ್ಲದೆ ಸೀಮೆಎಣ್ಣೆಯನ್ನು ಅಡಲ್ಟ್ರೇಷನ್ ಮಾಡಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ನಾನು ಈಗಾಗಲೇ ಉತ್ತರದಲ್ಲಿ ಹೇಳಿದಹಾಗೆ, ಬೆಳಗಾಂ ಜಿಲ್ಲೆಗೆ ೨೨೦೦ ಕಿಲೋಲೀಟರ್‌ನಿಂದ ೨೫೦೦ ಕಿಲೋಲೀಟರ್‌ವರೆಗೆ ಸೀಮೆಎಣ್ಣೆಯನ್ನು ಅವರ ಜಿಲ್ಲೆಯ ಬೇಡಿಕೆಗನುಗುಣವಾಗಿ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಇದರ ವಿತರಣೆ ಸರಿಯಾಗಿ ಆಗುತ್ತಿಲ್ಲವೆಂದು ಈಗತಾನೇ ನನ್ನ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಈಗಲೇ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಈಗಿರುವ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಎರಡನೆಯದಾಗಿ ರಾಜ್ಯದಿಂದ ಹೊರಗಡೆ ಸೀಮೆಎಣ್ಣೆ ಹೋಗುತ್ತಿದೆ ಎನ್ನುವ ವಿಚಾರವನ್ನೂ ಕೂಡ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. With regard to adulteration it has come to our notice and we have already taken all precautionary measures.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಕ್ರಮ ತೆಗೆದುಕೊಳ್ಳತಕ್ಕ ಅಧಿಕಾರಿಗಳು ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ನಂತರ ಪರಿಶೀಲನೆ ಮಾಡುತ್ತೀರಾ ? ಆಮೇಲೆ ಸೀಮೆಎಣ್ಣೆ ವಿತರಣೆಯಲ್ಲಿ ಹಳ್ಳಿಗಳಲ್ಲಿರತಕ್ಕ ಸೊಸೈಟಿಗಳ ಮೂಲಕ ವಿತರಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಇದರ ಬಗ್ಗೆ ಸರ್ಕಾರದ ತೀರ್ಮಾನವನ್ನು ಈಗಾಗಲೇ ಘೋಷಣೆ ಮಾಡಿದ್ದೇವೆ. ಸಹಕಾರಿ ಸಂಘಗಳಿಗೆ ಉತ್ತೇಜನ ಕೊಡಬೇಕೆಂಬ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇಲ್ಲಿಂದೀಚೆಗೆ ಆದಷ್ಟು ಹೆಚ್ಚಿಗೆ ಸಹಕಾರಿ ಸಂಘಗಳ ಮುಖಾಂತರ ಸೀಮೆಎಣ್ಣೆಯನ್ನು ವಿತರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಜವಾಬ್ದಾರಿಯನ್ನು Deputy Commissioner of the District Rationing Officer and at taluks Tahsildars are the Rationing Officers. ಫುಡ್ ಅಸಿಸ್ಟೆಂಟ್ಸ್ ಇರುತ್ತಾರೆ. ರೇಷನಿಂಗ್ ಆಫೀಸರ್ಸ್ ಇರುತ್ತಾರೆ. ಅವರು ಇದರ ಬಗ್ಗೆ ನಿಗಾ ವಹಿಸುತ್ತಾರೆ. ಸರಿಯಾಗಿ ವಿತರಣೆಯಾಗತಕ್ಕ ಬಗ್ಗೆ ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಪಿ.ಪಿ. ಹೆಗಡೆ.—ಮಾನ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರಿ ಸಂಘಗಳ ಮುಖಾಂತರ ಸೀಮೆಎಣ್ಣೆಯನ್ನು ಹಂಚುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಇರತಕ್ಕ ಎಷ್ಟೋ ಸಹಕಾರಿ ಸಂಘಗಳು ಸೀಮೆಎಣ್ಣೆಯನ್ನು ತೆಗೆದುಕೊಂಡು ಹೋಗಿ ವಿತರಣೆ ಮಾಡುತ್ತಿಲ್ಲ. ಏಕೆ ಸೀಮೆಎಣ್ಣೆಯನ್ನು ತೆಗೆದುಕೊಂಡು ಹೋಗಿ ವಿತರಣೆ ಮಾಡುತ್ತಿಲ್ಲವೆಂದು ಕೇಳಿದರೆ, ಇದರಿಂದ ನಮಗೆ ಹಾನಿಯಾಗುತ್ತದೆ, ನಾವು ಸೀಮೆಎಣ್ಣೆಯನ್ನು ಮಾರಾಟ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಹೀಗಾಗಿ ಬೆಳಗಾಂ ಜಿಲ್ಲೆಯ ಗಡಿ ಪ್ರದೇಶಗಳಲ್ಲಿರತಕ್ಕ ಜನರಿಗೆ ಮಹಾರಾಷ್ಟ್ರದಿಂದ ವ್ಯಾಪಾರಸ್ಥರು ಸೀಮೆಎಣ್ಣೆಯನ್ನು ತೆಗೆದುಕೊಂಡು ಒಂದಕ್ಕೆರಡರಷ್ಟು ಬೆಲೆಯನ್ನು ತೆಗೆದುಕೊಂಡು ಸೀಮೆಎಣ್ಣೆಯನ್ನು ಕೊಡುತ್ತಿದ್ದಾರೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ

ಜನರು ಇಷ್ಟೊಂದು ದುಬಾರಿ ಬೆಲೆಯನ್ನು ಕೊಟ್ಟು ಸೀಮೆಎಣ್ಣೆಯನ್ನು ಕೊಂಡುಕೊಳ್ಳಲಾಗುತ್ತಿಲ್ಲ. ಅವರು ಕತ್ತಲೆಯಲ್ಲಿದ್ದಾರೆ. ನಮ್ಮ ಜಿಲ್ಲೆಗೆ ಬೇಕಾದಷ್ಟು ಸೀಮೆಎಣ್ಣೆಯನ್ನು ಪೂರೈಕೆ ಮಾಡುತ್ತಿಲ್ಲ. ಚಿಕ್ಕೋಡಿ ತಾಲ್ಲೂಕಿನ ಅಗತ್ಯಕ್ಕಿಂತ ಬಹಳ ಕಡಿಮೆ ಸೀಮೆಎಣ್ಣೆಯನ್ನು ವಿತರಣೆ ಮಾಡುತ್ತಿದ್ದಾರೆ, ನಮಗಿಂತ ಚಿಕ್ಕ ತಾಲ್ಲೂಕು ಆಗಿರತಕ್ಕ ಹುಕ್ಕೇರಿಗೆ ಹೆಚ್ಚಿಗೆ ಸರಬರಾಜು ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಅಗತ್ಯಕ್ಕೆ ಬೇಕಾದಷ್ಟು ಸೀಮೆಎಣ್ಣೆಯನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತೆ ಇರತಕ್ಕ ಎಲ್ಲ ಸಹಕಾರಿ ಸಂಘಗಳು ಕಡ್ಡಾಯವಾಗಿ ಸೀಮೆಎಣ್ಣೆಯನ್ನು ತೆಗೆದುಕೊಂಡು ಹೋಗಿ ವಿತರಣೆ ಮಾಡುವಂತೆ ಸೂಕ್ತ ಆದೇಶವನ್ನು ಕೊಡಬೇಕು. ಗಡಿ ಪ್ರದೇಶದಲ್ಲಿರತಕ್ಕ ಗ್ರಾಮಾಂತರ ಪ್ರದೇಶದ ಜನರಿಗೆ ಮಹರಾಷ್ಟ್ರದಿಂದ ವ್ಯಾಪಾರಸ್ಥರು ಸೀಮೆಎಣ್ಣೆಯನ್ನು ತಂದು ಒಂದಕ್ಕೆರಡರಷ್ಟು ಬೆಲೆಗೆ ಸೀಮೆಎಣ್ಣೆಯನ್ನು ಮಾರುತ್ತಿರುವುದನ್ನು ತಪ್ಪಿಸುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರಾದ ಮಲ್ಲಾರಗೌಡ ಪಾಟೀಲ್‌ರವರು ಹೋಲ್‌ಸೇಲ್ ಡೀಲರ್ಸ್ ಹಾಗೂ ಖಾಸಗಿ ಏಜೆನ್ಸಿಗಳನ್ನು ತಪ್ಪಿಸಿ ಸಹಕಾರಿ ಸಂಘಗಳ ಮುಖಾಂತರ ಏಕೆ ವಿತರಣೆ ಮಾಡಬಾರದು ಎಂಬ ಸಲಹೆಯನ್ನು ಕೊಟ್ಟರು. ಇದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು ಎಂಬುದನ್ನು ಘೋಷಣೆ ಮಾಡಿದ್ದೇವೆ. ಎಲ್ಲ ಸಹಕಾರಿ ಸಂಘಗಳು ಸರಿಯಾಗಿ ಸೀಮೆಎಣ್ಣೆಯನ್ನು ವಿತರಣೆ ಮಾಡುತ್ತಿಲ್ಲವೆಂಬ ಮಾತು ಸತ್ಯಕ್ಕೆ ದೂರವಾದುದು. ಕೆಲವು ಸಹಕಾರಿ ಸಂಘಗಳಲ್ಲಿ ಆ ರೀತಿಯ ಲೋಪದೋಷ ಇರಬಹುದು. ಅವುಗಳನ್ನು ಸರಿಪಡಿಸಿ ಸರಿಯಾಗಿ ವಿತರಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ ಈಗ ಬೆಳಗಾಂ ಜಿಲ್ಲೆಗೆ ಏನು ಎಣ್ಣೆ ಕೊಡುತ್ತಿದ್ದೇವೆ ಅದರ ಜೊತೆಗೆ ಇನ್ನೂ ನೂರಿನ್ನೂರು ಲೀಟರ್ ಹೆಚ್ಚು ಎಣ್ಣೆ ಕೊಡುವುದಕ್ಕೆ ಆದೇಶ ಕೊಟ್ಟು ತಾಲ್ಲೂಕಿನ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.— ಸೀಮೆಎಣ್ಣೆ ಅಡಲ್ಟ್ರೇಷನ್ ಆಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಮತ್ತು ಸದಸ್ಯರು ಹೇಳಿದರು. ಅಡಲ್ಟ್ರೇಷನ್ ಯಾವರೀತಿ ಆಗುತ್ತಿದೆ. ಆ ರೀತಿ ಆಗಿರುವುದರಿಂದ ಬೆಲೆ ಹೆಚ್ಚಾಗುತ್ತಿದೆ. ಹಾಗೆ ಹೆಚ್ಚಾಗುತ್ತಿದ್ದರೆ ಅದನ್ನು ತಪ್ಪಿಸುವುದಕ್ಕೆ ತಾವು ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಜಿ. ಬಸವಣ್ಣಪ್ಪ.— ಅದು ಸರ್ಕಾರದ ಗಮನಕ್ಕೆ ಬಂತು. ಪೆಟ್ರೋಲ್ ಮತ್ತು ಡೀಸಲ್ ಬೆಲೆ ಜಾಸ್ತಿ ಆದಾಗ ಸೀಮೆಎಣ್ಣೆ ಬೆಲೆ ಕೂಡ ಜಾಸ್ತಿ ಆಯಿತು. ಅಡಲ್ಟ್ರೇಷನ್ ಏನು ನಡೆಯುತ್ತಿತ್ತು ಅದನ್ನು ಗಮನಿಸಿ ಸಂಬಂಧಪಟ್ಟವರ ಮೇಲೆ ಉಗ್ರವಾದ ಕ್ರಮವನ್ನೂ ತೆಗೆದುಕೊಂಡು ಈಗ ಕಾರ್ಡ್ ಹೋಲ್ಡರ್ಸ್ ಏನಿದ್ದಾರೆ ಅವರಿಗೆ ಮಾತ್ರ ಸಹಕಾರ ಸಂಘಗಳ ಮೂಲಕ ವಿತರಣೆ ಮಾಡಬೇಕೆಂದು ಮಾಡಿದ್ದೇವೆ. ಈಗ ಅಡಲ್ಟ್ರೇಷನ್ ನಡೆಯುತ್ತಿಲ್ಲ. ಅಂಥದ್ದೇನಾದರೂ ಕಂಡುಬಂದಾಗ ಅದನ್ನು ನನ್ನ ಗಮನಕ್ಕೆ ತಂದರೆ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಇವತ್ತಿನ ದಿವಸ ಕೆಲವು ಕಡೆ ಸಹಕಾರ ಸಂಘದವರು ಸೀಮೆ ಎಣ್ಣೆಯನ್ನು ಒಯ್ಯುವುದಿಲ್ಲ. ನಮ್ಮ ವರ್ತಕರು ಸಹಕಾರ ಸಂಘದವರು ಸೀಮೆ ಎಣ್ಣೆಯನ್ನು ತೆಗೆದುಕೊಂಡು ಹೋಗುತ್ತಿಲ್ಲ. ಇದನ್ನು ನಿಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅವರಿಗೆ ಬೇಕಾದರೆ ತೆಗೆದುಕೊಂಡು ಹೋಗುತ್ತಾರೆ, ಇಲ್ಲದಿದ್ದರೆ ಇಲ್ಲ. ತಾವು ಇದನ್ನು ಪರಿಶೀಲನೆ ಮಾಡಿ ಆ ರೀತಿ ಸೀಮೆ ಎಣ್ಣೆ ತೆಗೆದುಕೊಂಡು ಹೋಗದಿರುವವರ ಮೇಲೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.— ಕೆಲವೊಂದು ಸಹಕಾರ ಸಂಘಗಳಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದೆ ತೆಗೆದುಕೊಂಡು ಹೋಗುತ್ತಿಲ್ಲ. ತಾವು ಈಗೇನು ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದೀರಿ ಅದನ್ನು ನಾನು ಗಮನಿಸುತ್ತೇನೆ.

ವಿಶ್ವ ಕನ್ನಡ ಸಮ್ಮೇಳನ

೬೧ (೧೦೮) ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

೧. ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಮೈಸೂರಿನಲ್ಲಿ ಕಟ್ಟಿರುವ ೮೦ ಗೃಹಗಳು ಯಾರ ಅಧೀನದಲ್ಲಿವೆ? ಅವುಗಳ ನಿರ್ವಾಣ ಕಾರ್ಯ ಪೂರ್ಣವಾಗಿದೆಯೇ ?